ಈ) ತುಂಗಾ ಮೇಲ್ದಂಡೆ ಯೋಜನೆಗೆ ಬೇಕಾಗುವ 449.55 ಹೆ. ಅರಣ್ಯ ಪ್ರದೇಶ ಬಿಡುಗಡೆ ಮಾಡುವ ಬಗ್ಗೆ ಅರಣ್ಯ (ಸಂರಕ್ಷಣಾ) ಕಾಯ್ಕೆ 1980ರ ರೀತ್ಯ ಪ್ರಸ್ತಾವನೆಯನ್ನು ರಾಜ್ಯ ಸರ್ಕಾರವು ದಿನಾಂಕ 16-12-1996ರಲ್ಲಿ ಕೇಂದ್ರ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಿರುತ್ತದೆ. ಕೇಂದ್ರ ಸರ್ಕಾರವು ತನ್ನ ದಿನಾಂಕ 25-4-97ರ ಪತ್ರದ ಮೂಲಕ ಕೆಲವೊಂದು ಸೃಷ್ಟೀಕರಣ: ಮಾಹಿತಿಯನ್ನು ಕೋರಿರುತ್ತಾರೆ. ಈ ಮಾಹಿತಿಗಳನ್ನು ಅರಣ್ಯ ಇಲಾಖೆಯಿಂದ ಮತ್ತು ನೀರಾವರಿ ಇಲಾಖೆಯಿಂದ ಪಡೆಯಲಾಗುತ್ತಿದ್ದು, ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗುವುದು.

ಉ) ಅರಣ್ಯ (ಸಂರಕ್ಷಣಾ) ಕಾಯ್ದೆ 1980ರ ಪ್ರಕಾರ ಕೇಂದ್ರ ಸರ್ಕಾರದಿಂದ ಪೂರ್ವಾನುಮತಿ ಪಡೆಯದೆ ಅರಣ್ಯ ಭೂಮಿ ಬಿಡುಗಡೆ ಮಾಡಲು ಆಸ್ಪದವಿಲ್ಲ. ಕೇಂದ್ರ ಸರ್ಕಾರ ಕೋರಿರುವ ಹೆಚ್ಚುವರಿ ಮಾಹಿತಿಗಳನ್ನು ಕಳುಹಿಸಿ ಆ ನಂತರ ಕೇಂದ್ರ ಸರ್ಕಾರದ ಪೂರ್ವಾನುಮತಿ ಪಡೆದುಕೊಂಡು ಹಸ್ತಾಂತರಿಸಲಾಗುವುದು.

ವಿಷಯ: ರಾಜ್ಯದಲ್ಲಿ ಶಾಲಾ ಕೊಠಡಿಗಳ ಕೊರತೆ

2449 (2352)

ಶ್ರೀ ಯು.ಬಿ.ಬಣಕಾರ (ಹಿರೇಕೆರೂರು): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಜಿಲ್ಲಾವಾರು ಕೊರತೆ ಇರುವ ಪ್ರಾಥಮಿಕ ಶಾಲಾ ಕೊಠಡಿಗಳ ಸಂಖ್ಯೆ ಎಷ್ಟು;

ಆ) 1997-98ನೇ ಸಾಲಿನಲ್ಲಿ ಯಾವ ಯಾವ ಯೋಜನೆಯಲ್ಲಿ ಈ ಕೊರತೆ ನೀಗಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ?

ಶ್ರೀ ಹೆಚ್.ಜಿ.ಗೋವಿಂದೆಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):

ಅ) 20,080-00 (ಜಿಲ್ಲಾವಾರು ಪಟ್ಟಿ ಲಗತ್ತಿಸಿದೆ)

ಆ) 1997-98ನೇ ಸಾಲಿನಲ್ಲಿ ರಾಜ್ಯ ವಲಯದ ಯೋಜನೆಗಳಡಿಯಲ್ಲಿ ಪ್ರಾಥಮಿಕ ಶಾಲಾ ಕೊಠಡಿಗಳನ್ನು ನಿರ್ಮಿಸಲು ಈ ಕೆಳಗಿನಂತೆ ಆಯವ್ಯಯ ಒದಗಿಸಿಕೊಂಡಿದೆ.

| | | (ರೂ. ಕೋಟಗಳಲ್ಲಿ) |
|---|---|---|
| 1) | ಮೊದಲನೆ ತರಗತಿಗಾಗಿ ಪ್ರತ್ಯೇಕವಾಗಿ ಸರ್ಕಾರಿ ಪ್ರಾಥಮಿಕ ಶಾಲಾ ಕೊಠಡಿಗಳ ನಿರ್ಮಾಣಕ್ಕೆ | : 42.00 |
| 2) | ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಪ್ರಾಥಮಿಕ ಶಾಲಾ ಕಟ್ಟಡ ನಿರ್ಮಾಣಕ್ಕೆ | : 03.00 |
| 3) | ಸ್ವಾತಂತ್ರ್ಯದ 50ನೇ ವಾರ್ಷಿಕೋತ್ಸವದಡಿ ಸರ್ಕಾರಿ ಪ್ರಾಥಮಿಕ ಶಾಲಾ ಕೊಠಡಿಗಳ ನಿರ್ಮಾಣಕ್ಕೆ | : 09.00 |

**ರಾಜ್ಯದಲ್ಲಿ ಪ್ರಾಥಮಿಕ ಶಾಲಾ ಕೊಠಡಿಗಳ ಕೊರತೆ ಇರುವ ಜಿಲ್ಲಾವಾರು ವಿವರ:**

| ಕ್ರಸಂ. | ಜಿಲ್ಲೆಯ ಹೆಸರು | ಕೊರತೆ ಇರುವ ಕೊಠಡಿಗಳ ಸಂಖ್ಯೆ: |
|---|---|---|
| 1) | ಬೆಂಗಳೂರು ಉತ್ತರ | 100 |
| 2) | ಬೆಂಗಳೂರು ದಕ್ಷಿಣ | 460 |
| 3) | ಬೆಂಗಳೂರು ಗ್ರಾಮಾಂತರ | 700 |
| 4) | ಕೋಲಾರ | 1119 |
| 5) | ತುಮಕೂರು | 520 |
| 6) | ಶಿವಮೊಗ್ಗ | 101 |
| 7) | ಚಿತ್ರದುರ್ಗ | 1165 |
| 8) | ಮೈಸೂರು | 546 |
| 9) | ಮಂಡ್ಯ | 310 |

| | | |
|---|---|---|
| 10) | ಹಾಸನ | 1910 |
| 11) | ಚಿಕ್ಕಮಗಳೂರು | 171 |
| 12) | ಕೊಡಗು | 100 |
| 13) | ದಕ್ಷಿಣ ಕನ್ನಡ | 410 |
| 14) | ಬೆಳಗಾಂ | 1384 |
| 15) | ಬಿಜಾಪುರ | 166 |
| 16) | ಧಾರವಾಡ | 950 |
| 17) | ಉತ್ತರ ಕನ್ನಡ | 2430 |
| 18) | ಗುಲ್ಬರ್ಗಾ | 2733 |
| 19) | ಬಳ್ಳಾರಿ | 3008 |
| 20) | ರಾಯಚೂರು | 356 |
| 21) | ಬೀದರ್ | 1441 |
| | ಒಟ್ಟು | 20080 |

ವಿಷಯ: ಗದಗ ವಿಭಾಗದಲ್ಲಿ ಅರಣ್ಯ ಬೆಳೆಸುವ ಯೋಜನೆ

2450 (2344)

ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು): ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಗದಗ ವಿಭಾಗದ ತಾಲ್ಲೂಕುಗಳಲ್ಲಿ ಅರಣ್ಯ ಬೆಳೆಸಲು ಹಾಕಿಕೊಂಡ ಯೋಜನೆಗಳು ಯಾವುವು? 1996-97ನೇ ಸಾಲಿನಲ್ಲಿ ಯಾವ ಕೆಲಸಕ್ಕಾಗಿ ಎಷ್ಟು ಹಣ ಖರ್ಚು ಮಾಡಲಾಗಿದೆ (ತಾಲ್ಲೂಕುವಾರು ವಿವರ ನೀಡುವುದು)

ಆ) 1-4-97ರಿಂದ 30-6-97ರವರೆಗೆ ತಾಲ್ಲೂಕುವಾರು ಖರ್ಚು ಮಾಡಿದ ಹಣ ಎಷ್ಟು? (ಕೆಲಸಮಾಡಿದ ವಿವರ ನೀಡುವುದು)